## ಸಂಪಾದಕೀಯ

# ಚೈತನ್ಯದ ಬೆಂಬತ್ತಿ

## ಅಸ್ತಿತ್ವ

### ಅಸ್ತಿತ್ವ–ಸತ್ವ

ಇರುವಿಕೆ ಎಂದರೇನು? ಸಾಮಾನ್ಯವಾಗಿ ನಾವು ನಮ್ಮ ಇಂದ್ರಿಯಗಳ ಮೂಲಕ ಅನುಭವಿಸುವುದನ್ನು 'ಇದೆ' ಎಂದು ಕರೆಯುತ್ತೇವೆ. ಆದರೆ ತತ್ತ್ವಶಾಸ್ತ್ರದಲ್ಲಿ ಅದಕ್ಕೆ ವಿಶೇಷವಾದ ಅರ್ಥವಿದೆ, ವಿಸ್ತಾರವಾದ ಆಯಾಮವಿದೆ. ಇರುವಿಕೆಯ ಬಗ್ಗೆ ಚಿಂತಕರು ಕೇಳುವ ಪ್ರಶ್ನೆಗಳಿವು: "ಯಾವುದು ಇದೆ?", "ಒಂದು ವಸ್ತುವಿದೆಯೆಂದು ನಮಗೆ ಹೇಗೆ ತಾನೆ ಗೊತ್ತಾಗುತ್ತದೆ?", "ಇರುವಿಕೆಯನ್ನು ಗ್ರಹಿಸಲು ನಮ್ಮ ಇಂದ್ರಿಯಗಳು ನಮಗೆ ಎಷ್ಟು ತಾನೆ ಸಹಾಯ ಮಾಡಬಲ್ಲುವು?" ಇವುಗಳನ್ನು ತಿಳಿದುಕೊಂಡಾಗ, ನಮ್ಮ ಅಸ್ತಿತ್ವದ ಅಥವಾ ಇರುವಿಕೆಯ ಶ್ರೇಷ್ಠತೆ ಮತ್ತು ಭವ್ಯತೆಗಳು ನಮಗೆ ಅರಿವಾಗುತ್ತವೆ. ಇದರಿಂದ 'ಇರಬೇಕಲ್ಲಾ' ಎಂಬ ಗೊಣಗಿನಿಂದ 'ಇರುತ್ತಿರುವ' ನಮ್ಮ 'ಇರುವಿಕೆ' ಯ ಮಹತ್ವವು ನಮಗೆ ವೇದ್ಯವಾಗುತ್ತದೆ.

'Existence' ಎಂಬುದು ಅಸ್ತಿತ್ವದ ಭಾವವನ್ನು ಸೂಚಿಸುವ ಇಂಗ್ಲಿಷ್ ಪದ. ಅದು ಲ್ಯಾಟಿನ್ ಭಾಷೆಯ 'existere' ನಿಂದ ಬಂದಿದ್ದು. ಇದರ ಅರ್ಥ, appear, standout – 'ಕಾಣಿಸಿಕೊಳ್ಳುವುದು', 'ಬೇರೆಯಾಗಿ ನಿಲ್ಲಬಲ್ಲದ್ದು' ಎಂದು. ಹೀಗೆ ಯಾವುದು ತಾನೇ ತಾನಾಗಿ ಸ್ವತಂತ್ರವಾಗಿ ಇರಬಲ್ಲದೋ ಅದನ್ನು 'ಅಸ್ತಿತ್ವ' ಎಂದು ಕರೆಯಬಹುದು.

ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಶತಮಾನಗಳಿಂದ ಒಂದು ಪ್ರಶ್ನೆ ಚಿಂತಕರನ್ನು ಕಾಡುತ್ತಿತ್ತು. 'ನಾನು ಇದ್ದೇನೆ' ಎನ್ನುವ ವಾಕ್ಯದಲ್ಲಿ 'ಇದ್ದೇನೆ' ಎನ್ನುವುದು ವಾಕ್ಯದ 'ಕ್ರಿಯಾರ್ಥಕ.' ಆದರೆ, ಯಾವುದನ್ನು 'ಇದ್ದೇನೆ' ಎನ್ನುವ ಕ್ರಿಯೆಯು ಸೂಚಿಸುವುದೋ, ಅದು ತಾರ್ಕಿಕವಾಗಿ, 'ಇರುವ ವಸ್ತು' ವಿಗಿಂತ ಬೇರೆಯಾದದ್ದೇ ಅಥವಾ ಅದರ ಅವಿಭಾಜ್ಯ ಅಂಗವೇ? ಕೆಲವು ಚಿಂತಕರು, ಇರುವಿಕೆ ಎಂಬುದು 'ಈ ವಸ್ತು ಸತ್ಯ' ಎಂಬಷ್ಟೇ ಅರ್ಥವನ್ನು ಹೊಂದಿದೆ, ಆದ್ದರಿಂದ ಅದು ಕರ್ತೃವಾಗಲು ಸಾಧ್ಯವಿಲ್ಲ ಎನ್ನುತ್ತಾರೆ. ಇನ್ನು ಕೆಲವರು ಕರ್ಮಾರ್ಥಕವಾಗಿ ಕಾಣುವ ಇರುವಿಕೆಯ ಭಾವವನ್ನು ಕರ್ತೃವಾಗಿಯೂ ಬಳಸಲು ಸಾಧ್ಯ, ಹೀಗಾಗಿ 'ಇರುವಿಕೆ' ಎಂಬುದನ್ನು ವಸ್ತುವಿಗಿಂತ ಅಭೇದವೆಂದೇ ಕಲ್ಪಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಉದಾಹರಣೆಗೆ 'ಎತ್ತಿಗೆ ಎರಡು ಕೊಂಬುಗಳಿವೆ' ಎನ್ನುವುದನ್ನು 'ಎರಡು ಕೊಂಬುಗಳಿರುವ ಎತ್ತು' ಎಂದೂ ಹೇಳಬಹುದಲ್ಲವೇ? ಮೊದಲ ವಾಕ್ಯದಲ್ಲಿ ಕ್ರಿಯಾರ್ಥಕವಾದ 'ಇರುವಿಕೆಯು', ಎರಡನೆಯ ವಾಕ್ಯದಲ್ಲಿ 'ಕರ್ತೃವಾಚಕ' ವಾಗಿದೆ. 'ಇರುವಿಕೆ' ಎನ್ನುವುದು ಒಂದು ವಸ್ತುವು ಯಾವುದರಿಂದ ಆಗಿದೆಯೋ ಆ 'ಸತ್ವ' ವೇ (essence), ಇಲ್ಲವೇ ಎಂಬುದು ಮುಂದಿನ ಪ್ರಶ್ನೆ. 'ಇರುವಿಕೆ' ಎನ್ನುವುದು ಕರ್ತೃವಾಚಕವಾಗಿದೆ ಎಂದು ಪ್ರತಿಪಾದಿಸುವವರು ವಸ್ತುವಿನ 'ಇರುವಿಕೆ' ಯೇ ಅದರ 'ಸತ್ವ'ವೂ ಕೂಡ ಎಂದು ಹೇಳುತ್ತಾರೆ. 'ಇರುವಿಕೆ' ಯು ಕೇವಲ ಕರ್ಮಾರ್ಥಕವೆಂದು ವಾದಿಸುವವರು ಅದು ವಸ್ತುವಿನ 'ಸತ್ವ'ಕ್ಕಿಂತ ವಿಭಿನ್ನವಾದುದು ಎನ್ನುತ್ತಾರೆ.

> **ವಿನಾಶಹೊಂದಿದ ಮೇಲೆ ತಾನು ಏನಾಗುವನೋ, ಅದೇ ಸ್ಥಿತಿಯನ್ನು ಮನುಷ್ಯ ಈಗಾಗಲೇ ಹೊಂದಿದ್ದಾನೆ. ತಾನು ಮುಂದೆ ಏನಾಗಬಲ್ಲ ಸಾಧ್ಯತೆ ಇದೆಯೋ, ಈಗಲೂ ಅದೇ ಅವನಾಗಿದ್ದಾನೆ. ಒಬ್ಬ ವ್ಯಕ್ತಿ ಅವನ ಮರಣದ ಸ್ಥಿತಿಯನ್ನೇ ಜೀವಿಸುತ್ತಾನೆ; ತನ್ನ ಜೀವಿತದ ಸ್ಥಿತಿಯನ್ನೇ ಮರಣದಲ್ಲಿ ಕಾಣುತ್ತಾನೆ.**
>
> **–ಜೀನ್ ಪಾಲ್ ಸಾರ್ತ್ರ್**
> (Jean-Paul Sartre)

ಪ್ರಾಚೀನ ಗ್ರೀಕ್ ತತ್ತ್ವಶಾಸ್ತ್ರಜ್ಞ ಅರಿಸ್ಟಾಟಲನ ಪ್ರಕಾರ, ಶುದ್ಧ ವಸ್ತುವಿನಲ್ಲಿ (substance) ಮಾತ್ರವೇ 'ಇರುವಿಕೆ' ಇರುತ್ತದೆ. ಆ ವಸ್ತುವಿನ ಪ್ರಮಾಣ, ವರ್ಗ, ಕಾಲ, ದೇಶ ಇವುಗಳೆಲ್ಲ ಅನಂತರ ಕೂಡಿಕೊಳ್ಳುವ ಸಂಗತಿಗಳು.

ಇನ್ನು ಆಧುನಿಕ ಕಾಲಕ್ಕೆ ಬಂದರೆ, ಆಂಟೊಯಿನ್ ಅರ್ನಾಲ್ಡ್ (Antoine Arnauld) ಎಂಬುವವನು 'ಇರುವಿಕೆ' ಯ ತಾರ್ಕಿಕ ವಿಶ್ಲೇಷಣೆಯನ್ನು ಹೀಗೆ ಮಾಡುತ್ತಾನೆ: ಅವನ ಪ್ರಕಾರ 'ದೇವರು ಇದ್ದಾನೆ' ಎಂದರೆ 'ದೇವರು ಎಂಬುದು ಒಂದು ವಸ್ತು' ಎಂದರ್ಥ. ಇದೇ ರೀತಿ 'ಇರುವಿಕೆ' ಎಂಬ ಅಂತರಂಗದ ಲಕ್ಷಣವು, ಎಲ್ಲ ವಸ್ತುಗಳಲ್ಲಿ 'ಇರುವ' ಗುಣವಾಗಿ ಹೊರಗೆ ಕಾಣಿಸಿಕೊಳ್ಳುತ್ತದೆ ಎನ್ನುತ್ತಾನೆ. ಆದರೆ, ಡೇವಿಡ್ ಹ್ಯೂಮ್ ಎಂಬ ಚಿಂತಕನು, 'ಇರುವಿಕೆ' ಎನ್ನುವ ಗುಣವನ್ನು ಒಂದು ವಸ್ತುವಿನ ಮೇಲೆ ಹೇರಿದಾಗ, ನಾವು ಹೊಸದೇನನ್ನೂ ಸೇರಿಸುತ್ತಿಲ್ಲ ಎನ್ನುತ್ತಾನೆ. ಉದಾಹರಣೆಗೆ 'ಒಂದು ಹಸು' ಎನ್ನುವುದಕ್ಕೆ ನಾವು 'ಇದೆ' ಎಂದು ಸೇರಿಸಿದರೆ ಏನನ್ನೂ ಹೊಸದಾಗಿ ಸೇರಿಸಿದ ಹಾಗೆ ಆಗುವುದಿಲ್ಲ, ಅಲ್ಲವೇ? ಸುಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಇಮ್ಯಾನುಯಲ್ ಕ್ಯಾಂಟ್ ಈ ವಾದವನ್ನು ಒಪ್ಪುತ್ತ, ಹೀಗೆ ಹೇಳುತ್ತಾನೆ: "ಒಂದು ವಸ್ತುವಿಗೆ, ನಿಮ್ಮ ಮನಸ್ಸಿಗೆ ಬಂದ ಯಾವ ಗುಣಗಳನ್ನಾದರೂ, ಹೇಗಾದರೂ ಸೇರಿಸುತ್ತಲೇ ಹೋಗಿ– (ಅದರಿಂದ ಆ ವಸ್ತುವಿನ ಒಟ್ಟಾರೆ ಲಕ್ಷಣವು ಮಾರ್ಪಡುವುದೇ ಹೊರತು), ಆ ವಸ್ತು 'ಇದೆ' ಎಂದು ಹೇಳಿದರೆ, ಅದಕ್ಕೆ ಏನೂ ಸೇರಿಸಿದ ಹಾಗೆ ಆಗುವುದಿಲ್ಲ. ಅದರಲ್ಲಿ ಈಗಾಗಲೇ ಇಲ್ಲದಿರುವ 'ಸತ್ಯತ್ವ' ದ ಅಂಶವನ್ನು ನೀವು ತುಂಬಿಕೊಡುವಂತೆ ಆಗುವುದಿಲ್ಲ."

ಫ್ರಾನ್ಸ್ ಬ್ರೆಂಟಾನೋ (Franz Brentano) ಎಂಬ ಚಿಂತಕನು ಇದಕ್ಕಿಂತ ವಿಭಿನ್ನವಾದ ವಿಶ್ಲೇಷಣೆಯನ್ನು ಮಾಡುತ್ತಾನೆ.

> ತನ್ನ ಅಸ್ತಿತ್ವವನ್ನು, ಸ್ವಪ್ರಯತ್ನಗಳಿಂದ ಸಮರ್ಥಿಸಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಗೆ ಮುಟ್ಟಿದ ವ್ಯಕ್ತಿಯು ಚಿರಂತನವಾದ ಬಂಧನದಲ್ಲಿ ತಾನಾಗಿಯೇ ಸಿಕ್ಕಿಕೊಂಡಿರುತ್ತಾನೆ. *–ಎರಿಕ್ ಹಾಫರ್*
>
> ನಾವು ನೀತಿವಂತರಾಗಿರಲು, ನಮ್ಮ ಅಸ್ತಿತ್ವದ ಬಗ್ಗೆ ಮನನ ಮಾಡಬೇಕು. *–ಚಾರ್ಲ್ಸ್ ಡಿಕನ್ಸ್*
>
> ಇರುವುದು ಎನ್ನುವುದು ಎಲ್ಲವನ್ನೂ ವಿವರಿಸುತ್ತದೆ. *–ಹೆನ್ರಿ ಡೇವಿಡ್ ಥೋರೋ*

ಅವನ ಪ್ರಕಾರ, 'ರಾಮ ಬುದ್ಧಿವಂತ' ಎಂಬ ವಾಕ್ಯ 'ರಾಮ ಬುದ್ಧಿವಂತ**ನಾಗಿದ್ದಾನೆ'** ಎನ್ನುವ ಅರ್ಥವನ್ನೇ ಕೊಡುತ್ತದೆ. ಇಲ್ಲದಿದ್ದರೆ, 'ರಾಮ' ಮತ್ತು 'ಬುದ್ಧಿವಂತ' ಪದಗಳಿಗೆ ಸಂಬಂಧ ದೊರಕುವುದಿಲ್ಲ. ಈ ಸಂಬಂಧವನ್ನು ಅಸ್ತಿತ್ವದ್ಯೋತಕವಾದ 'ಇದ್ದಾನೆ' ಎನ್ನುವ ಪದವು ಮಾತ್ರ ದೊರಕಿಸಿಕೊಡಬಲ್ಲುದು. ಹೀಗಾಗಿ 'ಇರುವಿಕೆ' ಅಥವಾ 'ಅಸ್ತಿತ್ವ', ವಸ್ತು ಮತ್ತು ಅದರ ಗುಣಗಳ ನಡುವಿನ ಸೇತುವೆಯಾಗಿದೆ. ಅಥವಾ ವಸ್ತುವು ಅಸ್ತಿತ್ವದಲ್ಲಿ ಇದ್ದರಷ್ಟೇ ಗುಣಗಳನ್ನು ಹೊಂದಬಹುದು. ಹೀಗಾಗಿ ಯಾವುದೇ ಅನುಭವ ಅಥವಾ ಜ್ಞಾನವು 'ಅಸ್ತಿತ್ವ' ಅಥವಾ 'ಇರುವಿಕೆ'ಯ ಭಾವನೆಯನ್ನು ಕೂಡಿಕೊಂಡೇ ಇರುತ್ತದೆ. ಹೀಗೆ ಎಲ್ಲ ವಸ್ತುಗಳಿಗೂ, ಅವುಗಳ ಗುಣಗಳಿಗೂ ಆಧಾರಭೂತವಾದುದು 'ಇರುವಿಕೆ.'

## ಭಾವಸತ್ತಾವಾದಕ್ಕೆ ಪ್ರತಿರೋಧವಾಗಿ ಅಸ್ತಿತ್ವವಾದ

ಪಾಶ್ಚಾತ್ಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ 'ಭಾವಸತ್ತಾವಾದ' (Idealism) 'ಪ್ರಕೃತಿವಾದ' (Naturalism) ಮುಂತಾದ ಸಾಂಪ್ರದಾಯಿಕ ನಿಲುವುಗಳ ವಿರುದ್ಧ ಸಿಡಿದಿದ್ದ ಚಿಂತಕರು ಮುಂದಿಟ್ಟ ವಾದವೇ ಅಸ್ತಿತ್ವವಾದ (Existentialism). ಇದು ಮಾನವನ ಮಹತ್ವವನ್ನು ಒತ್ತಿ ಹೇಳುತ್ತದೆ. ವ್ಯಕ್ತಿಯಾಗಿ ಮಾನವನ ಜವಾಬ್ದಾರಿ ಮತ್ತು ಸ್ವಾತಂತ್ರ್ಯವನ್ನು ಸಾರುತ್ತದೆ. ಪ್ರಕೃತಿವಾದವು, ಜಡವಸ್ತುಗಳು ತಾಂತ್ರಿಕ ನಿಯಮಗಳ ಮಾರ್ಗದರ್ಶನಕ್ಕೆ ಒಳಪಟ್ಟಿದ್ದು, ಅದೇ ನಿಯಮಗಳು ಮಾನವನಲ್ಲಿ ಕಂಡುಬರುವ ಚಲನೆ ಮತ್ತು ಸ್ಪಂದನಗಳನ್ನು ಕೂಡ ನಿರ್ದೇಶಿಸುವುದರಿಂದ, ಜಡವಸ್ತುವಿನಂತೆಯೇ ಮಾನವನ ಚಲನವಲನಗಳನ್ನು ಅಧ್ಯಯನ ಮಾಡಬೇಕು ಎಂದು ಹೇಳುತ್ತದೆ. ಈ ವಾದದ ಪ್ರಕಾರ ಮಾನವನ ಸ್ವಾತಂತ್ರ್ಯವೆಂಬುದು ಕೇವಲ ಭ್ರಮೆ. ಭಾವಸತ್ತಾವಾದವು ನಿರಪೇಕ್ಷ ತತ್ತ್ವಗಳಿಗೆ ಪ್ರಾಧಾನ್ಯತೆ ಕೊಡುತ್ತದೆ. ಮಾನವನ ಮನಸ್ಸಿನಲ್ಲಿ ಇರುವುದಕ್ಕೆಲ್ಲಕ್ಕೂ ನಿರಪೇಕ್ಷ ತತ್ತ್ವಗಳೇ ಭೂಮಿಕೆಯಾಗಿವೆ ಎಂದು ಅದು ಹೇಳುತ್ತದೆ. ದೇವರ ಇಚ್ಛೆಯು ಮಾನವನ ಇಚ್ಛೆಯನ್ನು ನುಂಗಿಹಾಕುತ್ತದೆ ಎನ್ನುತ್ತ, ಮಾನವನ ಸ್ವತಂತ್ರ ವೃತ್ತಿ ಎಂಬುದು ಕೇವಲ ಭ್ರಮೆ ಎಂದು ಅದು ಪರಿಗಣಿಸುತ್ತದೆ. ಅಸ್ತಿತ್ವವಾದವು ಈ ಬಗೆಯ ಸಾಂಪ್ರದಾಯಿಕ ವಾದಗಳನ್ನು ತಿರಸ್ಕರಿಸಿ, ಮಾನವನ ವ್ಯಕ್ತಿತ್ವ, ಮನಸ್ಸು, ಕಾಲ–ದೇಶಗಳಲ್ಲಿ ಅವನ ಇರುವಿಕೆ – ಇವೆಲ್ಲವೂ ನೈಜವಾದುವು ಎಂದು ಹೇಳುತ್ತದೆ. ಅದೇ ಕಾಲದಲ್ಲಿ, ವಿಶ್ವಾತ್ಮಕ (universal), ನಿರಪೇಕ್ಷ (absolute) ಎಂದು ಭಾವಿಸುವುದೆಲ್ಲ ಅಸತ್ಯ ಎಂದು ಹೇಳುತ್ತದೆ.

ಇದು ವಿಜ್ಞಾನಿಗಳ ಅಭಿಪ್ರಾಯವೂ ಆಗಿತ್ತು ಎಂಬುದು ವಿಶೇಷ. ಅವರು ಪ್ರಯೋಗಕ್ಕೆ ಒಳಪಡುವ ಸಂಗತಿಗಳನ್ನು ಮಾತ್ರವೇ ನಂಬುತ್ತಿದ್ದರಷ್ಟೇ ಅಲ್ಲದೆ, ಅವುಗಳನ್ನು ಮೀರಿದ ಅಮೂರ್ತ ಕಲ್ಪನೆಗಳನ್ನು ಮತ್ತು ಭಾವನೆಗಳನ್ನು ತಿರಸ್ಕರಿಸುತ್ತಿದ್ದರು. ಶತಮಾನಗಳ ಕಾಲ ವಿಜ್ಞಾನವು ಎಲ್ಲವನ್ನೂ ನಿಖರವಾದ ದೃಷ್ಟಿಯಿಂದ ಅಳೆದು ಪರೀಕ್ಷಿಸಿ ನಿರ್ಧರಿಸುವ ದೃಷ್ಟಿಕೋನವನ್ನು ಹೊಂದಿತ್ತು ಮತ್ತು ಅದರಲ್ಲಿ ಬಹುತೇಕ ಸಫಲವಾಗಿಯೂ ಇತ್ತು. ಈ ಬಗೆಯ ವಾಸ್ತವಿಕ ದೃಷ್ಟಿಕೋನಕ್ಕೆ ಮೊದಲ ಪೆಟ್ಟು ಬಿದ್ದದ್ದು ಐನ್‌ಸ್ಟೈನ್ ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತದಿಂದ. ಜಗತ್ತಿನ ಪ್ರತಿಯೊಂದು ವಸ್ತುವೂ ಇನ್ನೊಂದು ವಸ್ತುವಿನ ಮೇಲೆ ಪ್ರಭಾವ ಬೀರುತ್ತದೆ; ಆದ್ದರಿಂದ ವಸ್ತುವಿನ ಗುಣಲಕ್ಷಣಗಳು ಪರಸ್ಪರ ಸಾಪೇಕ್ಷವೇ ಹೊರತು ಸ್ವತಂತ್ರವಾದ, ನಿರ್ದುಷ್ಟವಾದ ನಿರಪೇಕ್ಷವಲ್ಲವೆಂಬುದು ಐನ್‌ಸ್ಟೈನನ ಅಭಿಪ್ರಾಯ. ಇದಕ್ಕಿಂತಲೂ ಪ್ರಗತಿಗಾಮಿಯಾದ ಅನ್ವೇಷಣೆ ಕ್ವಾಂಟಮ್ ವಿಜ್ಞಾನವೆಂಬ ಹೊಸ ಶಾಖೆಯಲ್ಲಿ ನಡೆಯಿತು. ಎಲೆಕ್ಟ್ರಾನ್‌ಗಳಂತಹ ಸೂಕ್ಷ್ಮಪದಾರ್ಥಗಳನ್ನು ಪ್ರಯೋಗಕ್ಕೆ ಒಳಪಡಿಸಿದಾಗ, ಒಮ್ಮೆ ಅವು ನೇರವಾಗಿ ಸಂಚರಿಸುವ ಪದಾರ್ಥಗಳಂತೆ, ಮತ್ತೊಮ್ಮೆ ಅಲೆಗಳಂತೆ ಕಂಡುಬಂದವು. ಅವುಗಳ ಸ್ವಭಾವವನ್ನು ಹೀಗೆಯೇ ಎಂದು ಹೇಳಲಾಗದ ಮಟ್ಟಿಗೆ, ಯಾವುದೇ ಸಾಧ್ಯತೆಯ ನಿಯಮಗಳಿಗೆ ಒಳಪಡಿಸಲಾಗದಷ್ಟು, ಅವುಗಳ ರಚನೆ ಮತ್ತು ಸ್ವಭಾವಗಳು ಪರಿವರ್ತನೆ ಹೊಂದುತ್ತಿರುವುದನ್ನು ಗಮನಿಸಲಾಯಿತು. ಇದು ಸಾಂಪ್ರದಾಯಿಕ ವೈಜ್ಞಾನಿಕ ನಿಲುವಿಗೆ ವಜ್ರಾಘಾತವನ್ನೇ ಮಾಡಿತು ಎಂದು ಹೇಳಬಹುದು. ವಸ್ತುಗಳು ನಿರ್ದಿಷ್ಟ ರೀತಿಯಲ್ಲಿ, ನಿಯಮಗಳಿಗೆ ಒಳಪಟ್ಟು ನಡೆದುಕೊಳ್ಳುತ್ತವೆ ಎಂಬ ಊಹೆಯೊಂದಿಗೇ ಸಾಂಪ್ರದಾಯಿಕ ವಿಜ್ಞಾನ ಬೆಳೆದುಬಂದಿತ್ತು. ಅದರ ಪೊಳ್ಳುತನ ಕ್ವಾಂಟಮ್ ವಿಜ್ಞಾನದಿಂದ ಬಯಲಾಯಿತು.

## ಇರುವುದೇನು?

ವೇದಕಾಲೀನ ಋಷಿಮುನಿಗಳು ಪ್ರಕೃತಿಯ ಅದ್ಭುತಗಳ ಹಿಂದೆ ಇರುವ ದೈವೀಶಕ್ತಿಯನ್ನು ಕಂಡುಕೊಂಡರು. ಅವರಲ್ಲಿ ಕೆಲವರಿಗೆ, ಈ ಸೃಷ್ಟಿಗೆ ಮುಂಚೆ ಏನಿತ್ತು, ಈ ಸೃಷ್ಟಿಯ ಮೂಲವೇನು ಎಂಬ ಕುತೂಹಲ ಕೆರಳಿತು. ಆ ಆಶ್ಚರ್ಯಕರ ಭಾವನೆಯೇ 'ನಾಸದೀಯ ಸೂಕ್ತ' ಎಂಬ ಮಂತ್ರಭಾಗದಲ್ಲಿ ಹೀಗೆ ವ್ಯಕ್ತವಾಗಿದೆ:

ಆಗ ಅಸ್ತಿತ್ವವೂ ಇರಲಿಲ್ಲ, ನಾಸ್ತಿತ್ವವೂ ಇರಲಿಲ್ಲ
ಪೃಥ್ವಿಯೂ ಇರಲಿಲ್ಲ, ದೂರದಾಕಾಶವೂ ಇರಲಿಲ್ಲ
ಈ ಮಹಾಶೂನ್ಯವನ್ನು ಯಾವುದು ಆವರಿಸಿತ್ತು?
ಈ ಗಾಢಾಂಧಕಾರದ ಒಳಗೆ ಅದೇನಿದ್ದಿತ್ತು?

(ಸ್ವಾಮಿ ವಿವೇಕಾನಂದರ ಅನುವಾದ)

ಈ ಪ್ರಶ್ನೆಗೆ ಉತ್ತರವನ್ನು ನಾವು ನೋಡುವುದು ಛಾಂದೋಗ್ಯ ಉಪನಿಷತ್ತಿನಲ್ಲಿ: **ಸದೇವ ಸೋಮ್ಯ ಇದಮಗ್ರ ಆಸೀತ್ ಏಕಮೇವ ಅದ್ವಿತೀಯಮ್** (೬–೨–೧) – **'ಮಗು, ಮೊದಲು ಎರಡಿಲ್ಲದ ಒಂದೇ ಆದ 'ಸತ್' ಮಾತ್ರ ಇತ್ತು'** – ಈ ಹೇಳಿಕೆಯು ಯಾವ

ಗುಣಲಕ್ಷಣಗಳೂ ಇಲ್ಲದ, ಬರಿಯ 'ಇರುವಿಕೆ' ಯ ಸಾಧ್ಯತೆಯನ್ನು ಸೂಚಿಸುತ್ತದೆ. ಹಾಗೂ, ಕಾಲ-ದೇಶ-ನಾಮ-ರೂಪಗಳ ಸೃಷ್ಟಿಗೆ ಅದೇ ಮೂಲ ಎಂದೂ ಹೇಳುತ್ತದೆ.

ಇಲ್ಲಿ ಬರುವ 'ಸತ್' ಪದವು ಮಹತ್ವಪೂರ್ಣವಾದುದು. ಅದಕ್ಕೆ ಶ್ರೀಶಂಕರಾಚಾರ್ಯರು ಹೀಗೆ ವ್ಯಾಖ್ಯಾನ ಮಾಡುತ್ತಾರೆ: **ಸದಿತಿ ಅಸ್ತಿತಾಮಾತ್ರಂ ವಸ್ತು ಸೂಕ್ಷ್ಮಂ ನಿರ್ವಿಶೇಷಂ ಸರ್ವಗತಮ್ ಏಕಂ ನಿರಂಜನಮ್ ನಿರವಯವಂ ವಿಜ್ಞಾನಂ ಯದವಗಮ್ಯತೇ ಸರ್ವವೇದಾಂತೇಭ್ಯಃ** – 'ಸತ್' ಎಂದರೆ ಬರಿಯ 'ಇರುವಿಕೆ' ಇರುವ ವಸ್ತು. ಇದು ಸೂಕ್ಷ್ಮವಾದುದು, ನಿರ್ವಿಶೇಷವಾದುದು, ಸರ್ವಗತವೂ, ಒಂದೇ ಆಗಿರುವುದು, ಮತ್ತೊಂದರ ಅಂಟಿಲ್ಲದ್ದು, ಯಾವ ಅವಯವವೂ ಇಲ್ಲದ್ದೂ ಆದ ಚೈತನ್ಯ. ಇದೇ ಸರ್ವ ವೇದಾಂತಗಳ ಮೂಲಕ ತಿಳಿದುಬರುವ ತತ್ತ್ವ.

'ಯಾವಾಗ ಅದು (ಚೈತನ್ಯ) ಕೇವಲ 'ಸತ್' (ಇರುವಿಕೆ) ಆಗಿತ್ತು?' ಎಂಬ ಪ್ರಶ್ನೆಯನ್ನು ಆಚಾರ್ಯ ಶಂಕರರು ನಂತರ ಎತ್ತಿಕೊಳ್ಳುತ್ತಾರೆ. ಶ್ರುತಿಯ ಪ್ರಕಾರ, ಜಗತ್ತು ಹುಟ್ಟುವ ಮೊದಲು ಅದು ಕೇವಲ 'ಇರುವಿಕೆ' ಆಗಿತ್ತು. ಹಾಗಾದರೆ ಜಗತ್ತಿನಲ್ಲಿ ಇಂದು ಆ 'ಇರುವಿಕೆ' ಇಲ್ಲವೇನು? ಈಗಲೂ ಜಗತ್ತು 'ಇರುವಿಕೆ'ಯನ್ನು ಪಡೆದುಕೊಂಡೇ ಇದೆ. ಆದರೆ, ಈ ಜಗತ್ತಿನ ಸೃಷ್ಟಿಗಿಂತ ಮುಂಚೆ ಇರುವ ವಸ್ತುವನ್ನು ಕೇವಲ 'ಇರುವಿಕೆ'ಯ ಬುದ್ಧಿಯಿಂದ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯವೇ ಹೊರತು, ಪ್ರಪಂಚದಲ್ಲಿರುವ ಇತರ ವಸ್ತುಗಳನ್ನು ಅರ್ಥಮಾಡಿಕೊಳ್ಳುವ ಹಾಗೆ ಅದಕ್ಕೆ ಬೇರಾವ ಗುಣಗಳೂ ಇಲ್ಲ. ಅದಕ್ಕೆಂದೇ ಅದನ್ನು 'ಸತ್' (ಇರುವಿಕೆ) ಎಂದು ಕರೆಯುತ್ತಾರೆ ಎಂದು ಆಚಾರ್ಯರು ವಿವರಿಸುತ್ತಾರೆ.

ಶ್ರೀಶಂಕರಾಚಾರ್ಯರು ಇದಕ್ಕೆ ಎರಡು ಉದಾಹರಣೆಗಳನ್ನು ಕೊಡುತ್ತಾರೆ: ಸುಷುಪ್ತಿಯಲ್ಲಿ ನಮಗೆ ಹೊರಗಿನ ಪ್ರಪಂಚದ ಯಾವ ಅನುಭವವೂ ಆಗುವುದಿಲ್ಲ. ಆದರೂ ನಮ್ಮ 'ಇರುವಿಕೆ'ಯ ಅನುಭವ ನಮಗೆ ಇರುತ್ತದೆ. ಹಾಗೆಯೇ ಸೃಷ್ಟಿಗೆ ಮುಂಚಿನ 'ಇರುವಿಕೆ'ಯ ಸ್ಥಿತಿಯನ್ನೂ ಗ್ರಹಿಸಬೇಕು. ಇನ್ನೊಂದು ಉದಾಹರಣೆಯಲ್ಲಿ, ಒಬ್ಬನು ಬೆಳಗ್ಗೆ ಕುಂಬಾರನ ಮನೆಯಲ್ಲಿ ಮಣ್ಣನ್ನು ಮಾತ್ರ ನೋಡಿರುತ್ತಾನೆ. ಎಲ್ಲಿಗೋ ಹೋಗಿದ್ದವನು, ಸಂಜೆ ಬಂದು ನೋಡಿದರೆ, ಮಣ್ಣಿನ ಬದಲಾಗಿ ಮಡಕೆಗಳನ್ನು ಕಾಣುತ್ತಾನೆ. ಮಣ್ಣೇ ಈಗ ಮಡಕೆಗಳ ರೂಪದಲ್ಲಿ ಕಾಣಬರುತ್ತಿದೆ. ಬರಿ ಮಣ್ಣನ್ನು ನೋಡಿದಂತೆ, ಸೃಷ್ಟಿಯ ಆರಂಭದಲ್ಲಿ ಕೇವಲ 'ಇರುವಿಕೆ'ಯನ್ನು ಮಾತ್ರವೇ ಊಹಿಸಲು ಸಾಧ್ಯ. ಮಣ್ಣೇ ಮಡಕೆಗಳ ರೂಪದಲ್ಲಿ ಕಂಡುಬರುವಂತೆ, ಆ 'ಇರುವಿಕೆ'ಯೇ ಪ್ರಪಂಚರೂಪದಲ್ಲಿ ಈಗ ಕಾಣಬರುತ್ತಿದೆ.

ಮುಂದುವರಿದು ಇದೇ ಉಪನಿಷತ್ತು ಹೇಳುತ್ತದೆ: **ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ** – ಮಡಕೆಗಳಲ್ಲಿ ಕಾಣಬರುವ ಮಣ್ಣೆಂಬುದೊಂದೇ ಸತ್ಯ. ಉಳಿದವೆಲ್ಲ ಬರಿಯ ಮಾತಿನ ಆಡಂಬರವಷ್ಟೇ. ಹಾಗೆಯೇ, ಈ ಪ್ರಪಂಚದಲ್ಲಿ ಹಿಂದೆ ಹೆಸರಿಸಿದ 'ಇರುವಿಕೆ'ಯೊಂದೇ ಸತ್ಯ. ಅದೇ ವಿವಿಧ ರೂಪಗಳಲ್ಲಿ ಕಂಡುಬರುವುದರಿಂದ, ಉಳಿದವೆಲ್ಲವುಗಳ ಬಗೆಗಿನ ಜ್ಞಾನವು ಬರಿಯ ಮಾತಷ್ಟೇ, ಅದರಲ್ಲಿ ಸತ್ಯತ್ವವಿಲ್ಲ.

## 'ಅಸ್ತಿತ್ವಭಾವ' – 'ತತ್ತ್ವಭಾವ'

ಪರಿಶುದ್ಧ 'ಇರುವಿಕೆ' ಯೆಂಬುದು ಕೇವಲ ತಾತ್ತ್ವಿಕ ಪರಿಕಲ್ಪನೆ ಯಷ್ಟೆ. ಏಕೆಂದರೆ ಅದು ಇಂದ್ರಿಯಗ್ರಾಹ್ಯವಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ, ಕಠೋಪನಿಷತ್ತು ಹೀಗೆ ಹೇಳುತ್ತದೆ:

**ನೈವ ವಾಚಾ ನ ಮನಸಾ ಪ್ರಾಪ್ತುಂ ಶಕ್ಯೋ ನ ಚಕ್ಷುಷಾ।**
**ಅಸ್ತೀತಿ ಬ್ರುವತೋಽನ್ಯತ್ರ ಕಥಂ ತದುಪಲಭ್ಯತೇ ॥**

ಹೌದು, ನಿಜ. ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಕಣ್ಣಿನಿಂದಾಗಲಿ (ಇತರ ಇಂದ್ರಿಯಗಳಿಂದಾಗಲಿ), ಇದನ್ನು ಹೊಂದಲು ಸಾಧ್ಯವಿಲ್ಲ. ಆದರೂ ಇದರ ಅಸ್ತಿತ್ವವನ್ನು ಒಪ್ಪಿಕೊಳ್ಳುವ ವ್ಯಕ್ತಿ ಇದನ್ನು ಕಾಣಬಲ್ಲ (೨:೩:೧೨).

ಈ ಮಂತ್ರಕ್ಕೆ ಬರೆದಿರುವ ತಮ್ಮ ವಿದ್ವತ್ಪೂರ್ಣ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಅಸ್ತಿತ್ವದ ಪರಿಕಲ್ಪನೆಯನ್ನು ಬಹಳ ಸೊಗಸಾಗಿ ಅನ್ವೇಷಿಸುತ್ತಾರೆ: **ಕಾರ್ಯವಿಲಾಪನಸ್ಯ ಅಸ್ತಿತ್ವನಿಷ್ಠತ್ವಾತ್** – ಯಾವುದೇ ಕಾರ್ಯವು ತಾನು ನಷ್ಟಹೊಂದುವಾಗ 'ಇದೆ' ಎಂಬ ಧರ್ಮದಲ್ಲಿ ಕೊನೆಗಾಣುತ್ತದೆ. ಹೀಗೆಂದರೇನು? ಮಡಕೆಗಳು ಮಣ್ಣಿನ ಕಾರ್ಯರೂಪಗಳು (effect). ಮಣ್ಣು ಮಡಕೆಗಳ ಕಾರಣ (cause). ಮಡಕೆಗಳು ತಮ್ಮ ಸ್ವರೂಪವನ್ನು ಕಳೆದುಕೊಂಡಾಗ ವಿಲೀನವಾಗುವುದೆಲ್ಲಿ? ಮಣ್ಣಿನಲ್ಲಿ. ಮಣ್ಣು ಒಂದು ಅಸ್ತಿತ್ವವಿರುವ ವಸ್ತುವಷ್ಟೆ. ಸೂಕ್ಷ್ಮ ವಸ್ತುಗಳು ಕೂಡ ತಮ್ಮ ಕಾರಣದಲ್ಲಿ ವಿಲೀನವಾದಾಗಲೂ ಹೀಗೆಯೇ ಆಗುತ್ತದೆ. ಅತ್ಯಂತ ಸೂಕ್ಷ್ಮವಾದುದೂ 'ಇರುವಿಕೆ'ಯನ್ನು ಹೊಂದಿದ ಕಾರಣದಲ್ಲಿಯೇ ಲೀನವಾಗುತ್ತದೆ. ಹೀಗಾಗಿ ಎಲ್ಲಕ್ಕಿಂತ ಮೂಲವಾದುದು, 'ಇರುವಿಕೆ' ಅಥವಾ 'ಸತ್' ಭಾವವನ್ನು ಹೊಂದಿರಲೇಬೇಕು. ಇಲ್ಲದಿದ್ದರೆ ಏನಾಗುತ್ತದೆ? ಶ್ರೀಶಂಕರಾಚಾರ್ಯರು ಇದನ್ನು ಸ್ವಾರಸ್ಯವಾಗಿ ಹೀಗೆ ವರ್ಣಿಸುತ್ತಾರೆ: **ಮೂಲಂ ಚೇತ್ ಜಗತೋ ನ ಸ್ಯಾತ್, ಅಸದನ್ವಿತಮೇವ ಇದಂ ಕಾರ್ಯಮ್ 'ಅಸತ್' ಇತ್ಯೇವಂ ಗೃಹ್ಯೇತ, ನ ತು ಏತದಸ್ತಿ, 'ಸತ್', 'ಸತ್' ಇತ್ಯೇವಂ ತು ಗೃಹ್ಯತೇ**– ಜಗತ್ತಿನ ಮೂಲವೇ ಅಸತ್ತಾಗಿದ್ದರೆ, ಅದರ ಕಾರ್ಯವು ಕೂಡ ಆ ಇಲ್ಲದಿರುವಿಕೆಯನ್ನೇ ಪಡೆದುಕೊಂಡಿರುತ್ತಿತ್ತು. ಹಾಗಾದಾಗ, ನಾವು ಜಗತ್ತನ್ನು ಅಸ್ತಿತ್ವವೇ ಇಲ್ಲವೆಂಬಂತೆ ಭಾವಿಸಬೇಕಾಗಿತ್ತು. ಹಾಗೆ ನಾವು ಗ್ರಹಿಸುವುದಿಲ್ಲ. 'ಇದೆ', 'ಇದೆ' ಎಂತಲೇ ಜಗತ್ತನ್ನು ಗ್ರಹಿಸುತ್ತೇವೆ.

ಮುಂದಿನ ಮಂತ್ರದಲ್ಲಿ 'ಇರುವಿಕೆ'ಯನ್ನು ಅದರ ಎರಡು ಸ್ತರಗಳಲ್ಲಿಯೂ ಗುರುತಿಸಬೇಕೆಂದು ಉಪನಿಷತ್ತು ಉಪದೇಶಿಸುತ್ತದೆ. ಒಂದು, ಹೆಸರು, ರೂಪ, ಗುಣಗಳಿಂದ ಕೂಡಿಕೊಂಡ 'ಇರುವಿಕೆ.' ಅದನ್ನೇ ನಾವು ಪ್ರಪಂಚವೆನ್ನುವುದು. ಇದಕ್ಕೆ **'ಅಸ್ತಿತ್ವಭಾವ'** ಎಂದು ಹೆಸರು. ಇನ್ನೊಂದು ಪರಮಾರ್ಥ ದೃಷ್ಟಿ. ಅಲ್ಲಿ ಎಲ್ಲ ಬಗೆಯ ಹೊರಗಣ ಸಂಗತಿಗಳಿಂದ ವಿರಹಿತವಾಗಿ, ಕೇವಲ 'ಇರುವಿಕೆ' ಮಾತ್ರ ವೇದ್ಯವಾಗುತ್ತದೆ. ಅದನ್ನು **'ತತ್ತ್ವಭಾವ'** ಎನ್ನುವರು. ಹೀಗೆ 'ಇರುವಿಕೆ' ಯನ್ನು ಸೃಷ್ಟಿಯ ಎಲ್ಲ ಸ್ತರಗಳಲ್ಲೂ ಕಂಡುಕೊಳ್ಳಬೇಕು ಎನ್ನುವುದು ಈ ಮಂತ್ರದ ಆಶಯ (ಕಠೋಪನಿಷತ್ತು, ೨.೩.೧೩).

## ಅಸ್ತಿತ್ವ ವಿಜ್ಞಾನದ ಪ್ರಾಯೋಗಿಕತೆ

ಉಪನಿಷತ್ತುಗಳ ಮೇಲಿನ ಜಿಜ್ಞಾಸೆಯನ್ನು ಜೀವನದ ಮಾರ್ಗದರ್ಶಿ ಸೂತ್ರವನ್ನಾಗಿ ಭಗವದ್ಗೀತೆ ಬೋಧಿಸುತ್ತದೆ. ಅರ್ಜುನನಿಗೆ ಎದುರಾಗುವ ಮುಖ್ಯ ಸಮಸ್ಯೆಯೆಂದರೆ, ಯುದ್ಧದಿಂದ ತನ್ನ ಬಂಧುಬಾಂಧವರು ನಷ್ಟವಾಗುವರು, ಅದರ ಪಾಪ ತನಗೆ ತಟ್ಟುವುದು ಎಂದು. ಅದಕ್ಕೆ ಶ್ರೀಕೃಷ್ಣ, ಯಾವುದರಿಂದಲೂ ನಾಶಕ್ಕೆ ಒಳಗಾಗದ 'ಇರುವಿಕೆ'ಯೇ ಎಲ್ಲ ಜೀವಜಂತುಗಳ ನೈಜಸ್ವರೂಪ ಎಂದು ಬೋಧಿಸುತ್ತಾನೆ. ಹಾಗೆಯೇ, ಅತ್ಯಂತ ಪ್ರಮುಖವಾದ ತಾತ್ತ್ವಿಕ ನಿಯಮವೊಂದನ್ನು ತಿಳಿಸುತ್ತಾನೆ:

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ**

'ಯಾವುದು ಇಲ್ಲವೋ ಅದಕ್ಕೆ ಯಾವತ್ತೂ ಅಸ್ತಿತ್ವ ಉಂಟಾಗುವುದಿಲ್ಲ. ಯಾವುದು ಇದೆಯೋ ಅದಕ್ಕೆ ಯಾವತ್ತೂ 'ಇಲ್ಲದಿರುವುದು' ಎಂಬುದು ಉಂಟಾಗುವುದಿಲ್ಲ.' (೨.೧೬)

ಯಾವುದು ಇರುವುದು, ಯಾವುದು ಭ್ರಮೆ ಅನ್ನುವುದಕ್ಕೆ ಮೇಲಿನ ಪರೀಕ್ಷೆಯೇ ಮಾಪಕವಾಗಿದೆ. ಉದಾಹರಣೆಗೆ ದೇಹ 'ಇರುವಿಕೆ' ಯನ್ನು ಪಡೆದುಕೊಂಡಿದ್ದರೆ, ಅದು ಯಾವತ್ತೂ ಇಲ್ಲದಿರಬಾರದಿತ್ತು. ಆದರೆ ನಮ್ಮ ಅನುಭವಕ್ಕೆ ಬಂದಂತೆ, ಅದು ಇಂದಲ್ಲ, ನಾಳೆ ಇಲ್ಲದಾಗುತ್ತದೆ. ಅದೇ ರೀತಿ ಜಗತ್ತಿನ ಇತರ ವಸ್ತುಗಳೂ ಕೂಡ. ಹಾಗಾದರೆ ಅವುಗಳಾವುದಕ್ಕೂ ನೈಜ 'ಇರುವಿಕೆ' ಇಲ್ಲ ಎಂದ ಹಾಗಾಯಿತು. ಆದರೆ ಅವುಗಳು ತೋರಿ ಬರುವುದಾದರೂ ಹೇಗೆ? ಅದಕ್ಕೆ ಶ್ರೀಶಂಕರಾಚಾರ್ಯರೇ 'ದೃಗ್‌ದೃಶ್ಯ ವಿವೇಕ' ಎಂಬ ಪ್ರಕರಣ ಗ್ರಂಥದಲ್ಲಿ ಹೀಗೆ ಉತ್ತರಿಸುತ್ತಾರೆ:

**ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಥ ಪಂಚಕಮ್ ।**
**ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋ ದ್ವಯಮ್ ॥**

'ಪ್ರತಿಯೊಂದು ವಸ್ತುವಿನಲ್ಲಿಯೂ 'ಅಸ್ತಿ', 'ಭಾತಿ' 'ಪ್ರಿಯ', 'ನಾಮ' ಮತ್ತು 'ರೂಪ' ಗಳೆಂಬ ಐದು ಅವಿಭಾಜ್ಯ ಲಕ್ಷಣಗಳಿವೆ. **ಅಸ್ತಿ** ಎಂದರೆ ಇರುವಿಕೆ. **ಭಾತಿ** ಎಂದರೆ ತೋರುವುದು. **ಪ್ರಿಯ** ಎಂದರೆ ಆ ವಸ್ತು ಪ್ರಿಯವಾಗುವುದು. **ನಾಮ** ಎಂದರೆ ಆ ವಸ್ತುವಿನ ಹೆಸರು. **ರೂಪ** ಎಂದರೆ ಅದರ ರಚನೆ. ಮೊದಲ ಮೂರು ಲಕ್ಷಣಗಳು ಬ್ರಹ್ಮನ ಲಕ್ಷಣಗಳು. ಅಂದರೆ ಅವು ಎಲ್ಲಾ ರೀತಿಯ ವಸ್ತುಗಳಿಗೂ ಸಮಾನವಾಗಿವೆ. ಉಳಿದ ಎರಡು ಜಗದ್ರೂಪವಾಗಿ ಪರಿಣಮಿಸಿವೆ.' (೩೦)

ಪ್ರತಿಯೊಂದು ವಸ್ತುವಿನಲ್ಲೂ **ನಿತ್ಯ, ಅನಿತ್ಯ** – ಹೀಗೆ ಎರಡು ಅಂಶಗಳಿವೆ. ಚೈತನ್ಯವು ನಿತ್ಯಾಂಶ. ಅದರ ಲಕ್ಷಣಗಳು **ಅಸ್ತಿ, ಭಾತಿ** ಮತ್ತು **ಪ್ರಿಯ** ಎಂಬುವು. **ನಾಮ** ಮತ್ತು **ರೂಪಗಳು** ಅನಿತ್ಯಾಂಶಕ್ಕೆ ಸೇರಿದವು. ಅವು ಇಂದಲ್ಲ ನಾಳೆ ಅಳಿದುಹೋಗುತ್ತವೆ. ಹೀಗಾಗಿ ನೈಜ ಇರುವಿಕೆಯೆಂಬುದು ಚೈತನ್ಯರೂಪದ್ದಾಗಿದ್ದು, ಪ್ರತಿಯೊಂದು ವಸ್ತುವಿಗೂ ಆಧಾರಭೂತವಾಗಿರುತ್ತದೆ. ಆದ್ದರಿಂದ ಯಾವುದೇ ವ್ಯಕ್ತಿ ಅಥವಾ ವಸ್ತುವಿನ ನೈಜ ಇರುವಿಕೆಗೆ ಯಾವ ಧಕ್ಕೆಯೂ ಬರುವುದಿಲ್ಲ. ಅಳಿದುಹೋಗುವುದು ನಾಮರೂಪಗಳಷ್ಟೆ.

ಭಗವದ್ಗೀತೆಯು ಈ ಭಾವನೆಯ ಅನುಷ್ಠಾನಧರ್ಮವನ್ನು ಉಪದೇಶಿಸುತ್ತದೆ. ಮಾನವನು ತನ್ನ ಇರುವಿಕೆಯ ಆಗರವಾದ ಆತ್ಮದ ಅರಿವಿನ ಬೆಳಕಿನಲ್ಲಿ ಕರ್ತವ್ಯಗಳನ್ನೆಲ್ಲ ಮಾಡಬೇಕು. ಆಗ ಅವನಿಗೆ, ಕರ್ಮಗಳಿಂದ ಉಂಟಾಗುವ ಸುಖವಾಗಲಿ, ದುಃಖವಾಗಲಿ ತಟ್ಟುವುದಿಲ್ಲ. ಅವನು ನಿರ್ಲಿಪ್ತನಾಗಿ, ಆಧ್ಯಾತ್ಮಿಕ ಸಾಧನೆಯ ಅಂಗವೆಂಬಂತೆ ಕರ್ಮಗಳನ್ನು ಮಾಡುತ್ತ ಸಾಗಬಹುದು. ಇದು ಅವನನ್ನು ಕೃತಕೃತ್ಯತೆಯೆಡೆಗೆ ಒಯ್ಯುತ್ತದೆ.

ಹಾಗೆಂದೇ ನಾವು ಯಾವುದೋ ಆಗಬೇಕಾಗಿಲ್ಲ; ನಮ್ಮ ಸ್ವರೂಪದ ಅರಿವನ್ನು, ಅದರ 'ಇರುವಿಕೆ' ಯನ್ನು ಗ್ರಹಿಸಿದರೆ ಸಾಕು. ಹಣ, ಅಧಿಕಾರ, ಪ್ರತಿಷ್ಠೆ – ಇವು ನಮ್ಮ ವ್ಯಕ್ತಿತ್ವದ ಇರುವಿಕೆಗೆ ಯಾವ ರೀತಿಯಲ್ಲೂ ಹೆಚ್ಚಿನದೇನನ್ನೂ ಸೇರಿಸಲಾರವು. ಹಾಗೆಯೇ ಬಾಳಿನಲ್ಲಿ ನಾವು ಎದುರಿಸಬೇಕಾದ ಯಾವ ನಷ್ಟವೂ ನಮ್ಮ ಇರುವಿಕೆಯಿಂದ ಏನನ್ನೂ ಕಳೆಯಲಾರದು. ಹಿಂದೆಯೂ, ಇಂದಿಗೂ ಎಂದಿಗೂ ನಮ್ಮ 'ಇರುವಿಕೆ' ಮಾತ್ರವೇ ನಮ್ಮೊಡನೆ ಉಳಿಯುವುದು. ಆದ್ದರಿಂದ ಬಾಳಿನ ಗುರಿ, ನಮ್ಮ 'ಪರಿಶುದ್ಧ ಇರುವಿಕೆಯ ಭಾವ' ದ ಅರಿವನ್ನು ವಿಕಾಸಗೊಳಿಸಿಕೊಳ್ಳುತ್ತ ಹೋಗುವುದೇ ಹೊರತು, ಏನೋ ಒಂದು ಆಗುವುದಲ್ಲ, ಆಗ ಹೊರ ಪ್ರಪಂಚದ ಮೇಲಿನ ನಮ್ಮ ಅವಲಂಬನ ಕಡಮೆಯಾಗುತ್ತ ಹೋಗುತ್ತದೆ; ಪರಮಶಾಂತಿ ತಾನೇತಾನಾಗಿ ನಮ್ಮ ಮನಸ್ಸನ್ನು ತುಂಬಿಕೊಳ್ಳುವುದು; ಬದುಕು ಆನಂದಮಯವೂ, ಸಾರ್ಥಕವೂ ಆಗುವುದು.

ವೇದಾಂತವು ಅಸ್ತಿತ್ವವಾದದ ರೀತಿಯಲ್ಲಿಯೇ ಮಾನವನ ಘನತೆಯನ್ನು ತನ್ನದೇ ಆದ ವಿಶಿಷ್ಟರೀತಿಯಲ್ಲಿ ಎತ್ತಿ ಹಿಡಿಯುತ್ತದೆ. ಅದೇ ಸಮಯದಲ್ಲಿ ಆ ಘನತೆಯ ಸೆಲೆಯಾದ ಆದರ್ಶವನ್ನೂ ನಮ್ಮ ಮುಂದಿಡುತ್ತದೆ. ಮಾನವನ ಘನತೆಯು ಅವನ ದೇಹ, ಮನಸ್ಸು, ಬುದ್ಧಿಗಳಲ್ಲಿ ಇಲ್ಲ, ಅದು ಇರುವುದು ಅವನು ತನ್ನ ನೈಜ ಸ್ವರೂಪವಾದ ಶುದ್ಧ 'ಇರುವಿಕೆ' ಯಲ್ಲಿ ತಾದಾತ್ಮ್ಯಗೊಂಡಾಗ ಮಾತ್ರ. ಹೀಗೆ ಭಾವಸತ್ತಾವಾದ ಮತ್ತು ಅಸ್ತಿತ್ವವಾದಗಳ ಸುಂದರ ಸಮನ್ವಯವನ್ನು ನಾವು ವೇದಾಂತದಲ್ಲಿ ಕಾಣುತ್ತೇವೆ.

## ಉಪಸಂಹಾರ

ಭಗವತ್ತತ್ತ್ವವು ಚೈತನ್ಯಸ್ವರೂಪವಾಗಿದೆ. ಸತ್–ಚಿತ್–ಆನಂದಗಳು ಚೈತನ್ಯದ ಲಕ್ಷಣಗಳು. ಅವು ಈ ಜಗತ್ತಿನ ಆಚೆ ಅಥವಾ ಪ್ರತ್ಯೇಕವಾಗಿ ಇರುವ ಸಂಗತಿಗಳಲ್ಲ. ಪ್ರಪಂಚದಲ್ಲಿ ಕಾಣುವ ವೈವಿಧ್ಯಗಳೆಲ್ಲದಕ್ಕೂ ಆಧಾರಭೂತವಾಗಿ, ಪ್ರತಿಯೊಂದು ವಸ್ತುವಿನಲ್ಲೂ, ಪ್ರತಿ ಕ್ಷಣವೂ ಅನುಭವಕ್ಕೆ ಬರುವ ಸಂಗತಿಗಳು. ಅವುಗಳಲ್ಲಿ 'ಸತ್' ಅಥವಾ 'ಅಸ್ತಿತ್ವ' ದ ಅಂಶವನ್ನು ನಾವೀಗಾಗಲೇ ವಿಚಾರ ಮಾಡಿದ್ದೇವೆ. ಚೈತನ್ಯ ವಸ್ತುವಿನ ಬಗೆಗಿನ ನಮ್ಮ ಅರಿವು ಇನ್ನೂ ತಿಳಿಗೊಳ್ಳಬೇಕಾದರೆ, **ಚಿತ್** ಮತ್ತು **ಆನಂದ** – ಈ ಅಂಶಗಳ ಜಿಜ್ಞಾಸೆಯೂ ಅಗತ್ಯ. ಅದನ್ನೇ ನಾವು ಮುಂದಿನ ಸಂಚಿಕೆಗಳಲ್ಲಿ ಮಾಡುವುದು.